## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ.**12/2015**

ಚಾಸಾ-7 ಫ್ರಾಸಾ-10

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 30-04-2026

| | | |
|---|---|---|
| ಹೆಸರು | : | ಸಾಯಬಣ್ಣ |
| ಗಂಡನ ಹೆಸರು | : | ಸಿದ್ದರಾಮ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಕಂಪ್ಯೂಟರ್ ಅಪಟೇರಟ |
| ವಾಸಸ್ಥಳ | : | ನಾರಾಯಣಪುರ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ 4 ರಿಂದ 6, ಮತ್ತು 8 ಇವರು ಪರಿಚಯ ಇರುತ್ತಾರೆ. ನಾನು 2013 ದಿಂದ ಸ್ಥಧವರಗೆ ನಾನು ಹಾವಳಗಾ ರೇಣುಕಾ ಸಕ್ಕರೆ ಪ್ಯಾಕ್ಟರಿಯಲ್ಲಿ ಕಂಪ್ಯೂಟರ್ ಅಪಟೇರಟ ಆಗ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣ ಕುರಿತು ನನಗೆ ಗೊತ್ತಿಲ್ಲ. ನಾನು ಯಾವುದೇ ವಿಷಯ ಪೋಲಿಸರಿಗೆ ತಿಳಿಸಿಲ್ಲ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸ.ಸ.ಅ. ರವರಿಂದ

ನಾನು ಚಾಸಾ 6 ಮತ್ತು 8 ರವರು ಸಿಫ್ಟ ವೈಯಸ ಕೆಲಸ ಮಾಡುತ್ತಿದ್ದೇವು ಅಂದರೆ ಸರಿ. ಇಂಡೆಂಡ್ ಸ್ಲಿಪಗಳು ಅಧಿಕಾರಿಗಳ ಸಹಿ ಪಡೆದು ಅವುಗಳನ್ನು ಚಾಲಕರಿಗೆ ನೀಡುತ್ತಿದೇವು ಅಂದರೆ ಸರಿ.

ಸದರಿ ಕಂಪನಿಯಲ್ಲಿ 20 ಇಂಡೆಂಡ್ ಸ್ಲಿಪಗಳು ಕಳುವಾಗಿರತ್ತವೆ ಅಂತಾ ಮಾಹಿತಿ ನನಗೆ ಗೊತ್ತಾಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಆರೋಪಿತರು ಇಂಡೆಂಡ್ ಸ್ಲಿಪಗಳ ಮೇಲೆ ನಕಲು ಸಹಿ ಮಾಡಿ ದುರುಪಯೋಗ ಪಡಿಸಿಕೊಂಡ ವಿಷಯ ನನಗೆ ಗೊತ್ತಿರುತ್ತದೆ ಅಂದರೆ ಸರಿ ಅಲ್ಲ. ಒಟ್ಟು 1,19,054 ಇವುಗಳನ್ನು ದುರುಪಯೋಗ ಪಡಿಸಿಕೊಂಡ ವಿಷಯ ನನಗ ಗೊತ್ತಿರುತ್ತದೆ ಅಂದರೆ ಸರಿ ಅಲ್ಲ. ಈ ಕುರಿತು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿ ಅಲ್ಲ.

ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ 10 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ **1, 3** ಮತ್ತು **5** ಪರವಕೀಲರು ಶ್ರೀ **DBP** ಮತ್ತು **SSP** ರವರು ಪಾಟೀ ಸವಾಲು ಇಲ್ಲ ಅಂತಾ ತಿಳಿಸಿರುತ್ತಾರೆ

ಮರು ವಿಚಾರಣೆಃ **- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ